# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.29/2022

CW-1/PW-2

| | | |
|---|---|---|
| ಹೆಸರು | ಃ- | ಆರ್.ಕಮಲ್ |
| ತಂದೆ ಹೆಸರು | ಃ- | ರಾಜು |
| ವಯಸ್ಸು | ಃ- | 37 ವರ್ಷ |
| ವೃತ್ತಿ | ಃ- | ಸೆಕ್ಯೂರಿಟಿ ಗಾರ್ಡ್ |
| ವಾಸ ಸ್ಥಳ | ಃ- | ರಾಮನಗರ |
| ದಿನಾಂಕ | ಃ- | 08.06.2023 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಃ-

ನಾನು 2022 ರಲ್ಲಿ ಈಗಲ್‌ಟನ್ ರೆಸಾರ್ಟ್ ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದು, ಆ ಸಮಯದಲ್ಲಿ ದಿನಾಂಕ 08.02.2022 ರಂದು ಮಧ್ಯಾಹ್ನ 1.25 ರ ಸಮಯಕ್ಕೆ ಮೃತ ಸುಂದರ್ ರಘು ರಾಜನ್ ರವರ ಮಗ ಅಕ್ಷತ್ ರವರು ನಮ್ಮ ಶಿಫ್ಟ್ ಮೊಬೈಲ್ ನಂಬರ್‌ಗೆ ಕರೆ ಮಾಡಿ ತನ್ನ ತಂದೆ ಅಂದಿನ ಬೆಳಗ್ಗೆಯಿಂದ ಫೋನ್ ಸ್ವೀಕರಿಸುತ್ತಿಲ್ಲವೆಂದು ಹಾಗೂ ಈ ಬಗ್ಗೆ ನೋಡುವಂತೆ ನನಗೆ ಹೇಳಿದರು. ಆಗ ನಾನು ಹಾಗೂ ನನ್ನ ಸಹಾಯಕರಾದ ಚಾಸಾ-2 ರವರು ಸುಂದರ್ ರಘು ರಾಜನ್ ರವರ ಮನೆ ನಂ.ಸಿ21 ರ ಬಳಿ ಹೋಗಿ ನೋಡಲಾಗಿ, ಅವರ ಮನೆಯಲ್ಲಿ ಇದ್ದಂತಹ ನಾಯಿ ಬೊಗಳುತ್ತಿದ್ದು, ಅವರ ಮನೆಯಲ್ಲಿ ಕೆಲಸ ಮಾಡುವ ಜೋಗಿಂದರ್ ಮಹಡಿಯ ಮೇಲಿನಿಂದ ನಮ್ಮನ್ನು ನೋಡಿ ನಂತರ ಕೆಳಗೆ ಬಂದು ಗೇಟನ್ನು ತೆರೆದನು. ಆತ ನಮ್ಮೊಂದಿಗೆ ಮಾತನಾಡಿದ್ದು ಆಗ ನಾವು ಆತನನ್ನು

ಕುರಿತು ಸುಂದರ್ ರಘು ರಾಜನ್ ಹಾಗೂ ಅವರ ಹೆಂಡತಿಯ ಬಗ್ಗೆ ವಿಚಾರಿಸಿ ಸದರಿಯವರು ಫೋನನ್ನು ಸ್ವೀಕರಿಸುತ್ತಿಲ್ಲವೆಂಬ ಬಗ್ಗೆ ಕೇಳಲಾಗಿ ಆತ ಆ ದಿನ ಬೆಳಗ್ಗೆ ಸುಂದರ್ ರಘು ರಾಜನ್ ಹಾಗೂ ಅವರ ಹೆಂಡತಿ ಟ್ಯಾಕ್ಸಿ ಮಾಡಿಕೊಂಡು ಬೆಂಗಳೂರಿಗೆ ಹೋದರೆಂದು ತಿಳಿಸಿದನು. ಆಗ ಈ ವಿಚಾರವನ್ನು ನಾವು ಅವರ ಮಗನಿಗೆ ನನ್ನ ಬಳಿಯಿದ್ದ ಶಿಫ್ಟ್ ಫೋನಿನ ಮೂಲಕ ಕರೆ ಮಾಡಿ ತಿಳಿಸಿದೆವು. ಆಗ ಅವರ ಮಗ ನಮ್ಮ ಶಿಫ್ಟ್ ಫೋನಿನ ಮೂಲಕ ಜೋಗಿಂದರ್ ಬಳಿ ಮಾತನಾಡಿದರು. ಆ ನಂತರ ಜೋಗಿಂದರ್ ನನಗೆ ಫೋನನ್ನು ವಾಪಸ್ ಕೊಟ್ಟಿದ್ದು, ಆ ನಂತರ ಅಕ್ಷತ್ ರವರು ಮನೆಯ ಒಳಗೆ ಹೋಗಿ ಒಂದು ಬಾರಿ ಪರಿಶೀಲಿಸುವಂತೆ ನಮಗೆ ಸೂಚಿಸಿದ್ದು ಅದರಂತೆ ನಾವು ಅವರ ಮನೆಯ ಒಳಗೆ ಹೋಗಿ ನೋಡಿದಾಗ ಹಾಲಿನ ಒಂದು ರೂಂಗೆ ಬೀಗ ಹಾಕಲಾಗಿತ್ತು. ಸದರಿ ರೂಮಿನ ಬಗ್ಗೆ ಕೇಳಲಾಗಿ ಆತ ಮನೆಯ ಎಲ್ಲಾ ರೂಮುಗಳಿಗೂ ಬೀಗ ಹಾಕಲಾಗಿದ್ದು ಅದರ ಕೀಗಳು ಸುಂದರ್ ರಘು ರಾಜನ್ ರವರ ಹೆಂಡತಿಯ ಬಳಿ ಇರುವುದಾಗಿ ತಿಳಿಸಿದನು. ಆ ನಂತರ ಮಹಡಿಯ ಮೇಲೆ ಹೋಗಿ ನೋಡಲಾಗಿ ಮೇಲಿನ ಒಂದು ರೂಮಿಗೆ ಹಾಕಲಾಗಿದ್ದ ಬೀಗದ ಕೈ ಅಲುಗಾಡುತ್ತಿತ್ತು. ಆಗ ನಾವು ಜೋಗಿಂದರ್‌ನನ್ನು ಕುರಿತು ಸುಂದರ್ ರಘು ರಾಜನ್ ರವರ ಹೆಂಡತಿ ಕೀಗಳನ್ನು ತೆಗೆದುಕೊಂಡು ಹೋಗಿರುವುದಾಗಿ ಹೇಳಿದ್ದು ಇಲ್ಲಿಯೇ ಕೀ ಇದೆ ಎಂದು ಹೇಳಿ ನಂತರ ಅನುಮಾನಗೊಂಡು ಅದೇ ರೂಮಿನ ಬಾಗಿಲನ್ನು ತೆರೆದು ನೋಡಿದೆವು. ಅಲ್ಲಿ ಸುಂದರ್ ರಘು ರಾಜನ್ ರವರು ಮಂಚದ ಮೇಲೆ ಮಲಗಿದ್ದು, ಅವರ ಮುಖಕ್ಕೆ ಟವೆಲ್ ಮುಚ್ಚಿದ್ದು ಅವರು ಮೃತ ಹೊಂದಿದ್ದರು. ಆಗ ನಾವು ಹೆದರಿ ಮನೆಯಿಂದ ಆಚೆ ಬಂದಿದ್ದು ನಮ್ಮೊಂದಿಗೆ ಜೋಗಿಂದರ್ ಸಹ ಆಚೆ

ಬಂದನು. ಆಗ ನಾನು ನಮ್ಮ ಸೆಕ್ಯೂರಿಟಿ ಇಂಚಾರ್ಜ್ ಹಾಗೂ ನಮ್ಮ ಮ್ಯಾನೇಜರ್‌ಗೆ ಕರೆ ಮಾಡಿ ವಿಚಾರವನ್ನು ತಿಳಿಸಿದೆನು ಹಾಗೂ ಅವರ ಮೂಲಕ ಅಕ್ಷತ್ ರವರಿಗೆ ಘಟನೆಯ ಕುರಿತು ತಿಳಿಸಲಾಯಿತು.

2. ನಮಗೆ ಸುಂದರ್ ರಘು ರಾಜನ್ ರವರ ಹೆಂಡತಿಯ ಬಗ್ಗೆ ಮೊದಲಿಗೆ ತಿಳಿದಿರಲಿಲ್ಲ, ಆ ನಂತರ ಘಟನೆಯ ಬಗ್ಗೆ ನಮ್ಮ ಮ್ಯಾನೇಜರ್ ಪೊಲೀಸರಿಗೆ ತಿಳಿಸಿದ್ದು ಪೊಲೀಸರು ಅಲ್ಲಿಗೆ ಬಂದು ಪರಿಶೀಲಿಸಿದಾಗ ಮನೆಯ ಕೆಳಗಿನ ಅಂತಸ್ತಿನಲ್ಲಿದ್ದ ಬೀಗ ಹಾಕಲಾಗಿದ್ದ ರೂಮಿನಿಲ್ಲಿ ಸುಂದರ್ ರಘು ರಾಜನ್ ರವರ ಹೆಂಡತಿ ಆಶಾ ರವರು ಸಹ ಮೃತ ಹೊಂದಿದ್ದರು. ಆ ನಂತರದಲ್ಲಿ ಜೋಗಿಂದರ್ ಹಾಗೂ ಆತನ ಅಣ್ಣ ಇಬ್ಬರೂ ಸೇರಿ ಸುಂದರ್ ರಘು ರಾಜನ್ ಹಾಗೂ ಅವರ ಹೆಂಡತಿಯನ್ನು ಸುತ್ತಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದರೆಂಬ ವಿಚಾರ ಗೊತ್ತಾಯಿತು. ಈ ಬಗ್ಗೆ ನಾನು ದೂರನ್ನು ಕೊಟ್ಟಿದ್ದು ದೂರಿನ ನಕಲು ಪ್ರತಿಯನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಈ ಪ್ರಕರಣದ ಮೂಲ ಪ್ರಕರಣವು ಸಿ.ಸಿ ನಂ.25/2022 ಎಂದು ಇದ್ದು ಈಗಾಗಲೇ ಸದರಿ ಪ್ರಕರಣದ ಆರೋಪಿಗಳನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಕಮಿಟ್ ಮಾಡಲಾಗಿದ್ದು, ಈ ಪ್ರಕರಣದ ಮೂಲ ದಾಖಲೆಗಳು ಸದರಿ ಪ್ರಕರಣದ ಕಡತದಲ್ಲಿದ್ದು ಈ ಪ್ರಕರಣದ ಕಡತದಲ್ಲಿ ಕೇವಲ ದೃಢೀಕೃತ ನಕಲುಗಳು ಲಭ್ಯವಿದ್ದು ದಿನಾಂಕ 08.02.2022 ರ ದೂರು ಕೇವಲ ನಕಲು ಪ್ರತಿಯಾಗಿದ್ದು ಅದರಲ್ಲಿ ಯಾವುದೇ ಸೀಲ್ ಅಥವಾ ಸಹಿ ಇರುವುದಿಲ್ಲ. ಆದ ಕಾರಣ ಸದರಿ ದಾಖಲೆಯನ್ನು ಕೇವಲ ಗುರುತಿಸುವಿಕೆಯ ಸಲುವಾಗಿ ನಿಪಿ-5 ಎಂದು ಗುರುತಿಸಲಾಯಿತು.

3. ಅದೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಸ್ಥಳದಲ್ಲಿದ್ದ ಸುತ್ತಿಗೆ ರಕ್ತದ ಕಲೆಯಿದ್ದ ಟವೆಲ್, ಬಾಟಲ್, ಗ್ಲಾಸನ್ನು ಅಮಾನತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 08.02.2022 ರ ಕೃತ್ಯ ಸ್ಥಳದ ಅಮಾನತು ಪಂಚನಾಮೆಯ ನಕಲು ಪ್ರತಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ.

ಈ ಹಂತದಲ್ಲಿ ಕೃತ್ಯ ಸ್ಥಳದ ಅಮಾನತು ಪಂಚನಾಮೆಯ ನಕಲು ಪ್ರತಿ ಮಾತ್ರ ಕಡತದಲ್ಲಿ ಲಭ್ಯವಿರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.